ದಿನಾಂಕ 11.08.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ 1 ನೇ ಪಕ್ಷಗಾರರ ಪರವಾಗಿ ಶ್ರೀ ಎಸ್. ಜೆ. ವಕೀರಿಲಂದ ಃ

ನಾನು enquiry officer ಆಗಿ ಕರ್ತವ್ಯ ನಿರ್ವಹಿಸಲು, ನನಗೆ ತರಬೇತಿ ಆಗಿತ್ತು. ಯಾವ ಇಸವಿಯಲ್ಲಿ ತರಬೇತಿ ಆಗಿತ್ತು ಎಂದು ನೆನಪಿಲ್ಲ. ನನಗೆ ತರಬೇತಿಯನ್ನು ನನಗೆ ಕೊಟ್ಟಿಲ್ಲದೇ ಇದ್ದರೂ ಸಹ ತರಬೇತಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1994 ರಲ್ಲಿ Establishment Supervisor (ಸಿಬ್ಬಂದಿ ಮೇಲ್ವಿಚಾರಕನಾಗಿ) ನೇಮಕಗೊಂಡಿದ್ದೆನು. ನಿಆರ್ 31 - order sheet, ಡಿ.ಇ ನಂಃ 10/2014 ಗೆ ಸಂಬಂಧಪಟ್ಟಿದೆ. ಸದರಿ ನಿಆರ್ 31 - order sheet ನಲ್ಲಿ 1 ನೇ ಪಕ್ಷಗಾರರು ಡಿ.ಇ ಗೆ ಹಾಜರಾಗಿರುವ ಬಗ್ಗೆ, ಎಲ್ಲಿಯೂ ಸಹಿಯನ್ನು ಮಾಡಿಲ್ಲ ಎಂದರೆ ಸರಿ. ಸದರಿ order sheet ನಲ್ಲಿ, day to day proceedings ಗೆ ಸಂಬಂಧಟ್ಟಂತೆ 1 ನೇ ಪಕ್ಷಗಾರರಿಗೆ ಆರ್.ಪಿ ಎ ಡಿ ಮುಖಾಂತರ ನೋಟಿಸು ನೀಡಲು ಆದೇಶಿಸಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ನೋಟಿಸು 1 ನೇ ಪಕ್ಷಗಾರರಿಗೆ ಜಾರಿಯಾಗಿದೆಯಾ ಎನ್ನುವುದನ್ನು order sheet ನಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. order sheet ನಲ್ಲಿ ದಿಃ 26.08.2014 ಮತ್ತು 22.09.2014 ರಂದು, 1 ನೇ ಪಕ್ಷಗಾರರು ನೋಟಿಸನ್ನು ತೆಗೆದುಕೊಂಡಿದ್ದಾರೆ ಹಾಗೂ ವಿಚಾರಣೆಗೆ ಹಾಜರಾಗಿಲ್ಲ ಎಂದು ಬರೆದಿದೆ. ದಿಃ 26.09.2014 ರಂದು ನನ್ನ ನಿರ್ಣಯವನ್ನು 1 ನೇ ಪಕ್ಷಗಾರರಿಗೆ ನೀವು ತಿಳಿಸಿದ್ದೀರಾ ಎಂದರೆ ಸಾಕ್ಷಿಯು, ನಿರ್ಣಯವನ್ನು 1 ನೇ ಪಕ್ಷಗಾರರಿಗೆ ನಾನು ತಿಳಿಸುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 26.09.2014 ರಂದು, enquiry ಮುಕ್ತಾಯಗೊಂಡಿದೆ ಎನ್ನುವುದು ನೀವು 1 ನೇ ಪಕ್ಷಗಾರರಿಗೆ intimation ಮಾಡಿದ್ದೀರಾ ಎಂಬ ಪ್ರಶ್ನೆಗೆಸಾಕ್ಷಿಯು intimation ಮಾಡುವ ಅವಶ್ಯಕತೆ ನನಗೆ ಇಲ್ಲ ಎಂದು ನುಡಿಯುತ್ತಾರೆ. ನಾನು ಆರ್.ಪಿ.ಎ.ಡಿ ಮೂಲಕ 1 ನೇ ಪಕ್ಷಗಾರರಿಗೆ ಕಳುಹಿಸಿದ ನೋಟಿಸುಗಳು, ಆತನಿಗೆ ಖುದ್ದಾಗಿ ಜಾರಿಯಾಗಿರುವ ಬಗ್ಗೆ ಯಾವುದೇ postal acknowledgment ಗಳು ಇಲ್ಲ ಎಂದರೆ ಸರಿಯಲ್ಲ. ನಾನು ಕಳುಹಿರುವಂತಹ ನೋಟಿಸು, ಯಶೋಧ ಎನ್ನುವವರಿಗೆ ಜಾರಿಯಾಗಿದೆ ಮತ್ತು 1 ನೇ ಪಕ್ಷಗಾರ ವೆಂಕಟೇಶ್ ಗೆ ಜಾರಿಯಾಗಿಲ್ಲ ಎಂದರೆ ಸಾಕ್ಷಿಯು, ಒಂದು ನೋಟಿಸು 1 ನೇ ಪಕ್ಷಗಾರ ವೆಂಕಟೇಶ್ ಗೆ ಜಾರಿಯಾಗಿದೆ, ಉಳಿದ ನೋಟಿಸು ಆ ವಿಳಾಸದಲ್ಲಿ ವಾಸ ಇರುವ ಯಶೋಧಮ್ಮ ಮತ್ತು ನಾಗಮ್ಮ ರವರಿಗೆ ಜಾರಿಯಾಗಿದೆ ಎಂದು ನುಡಿಯುತ್ತಾರೆ. ನಾನು ಕಳುಹಿಸಿದಂತಹ ನೋಟಿಸುಗಳು 1 ನೇ

ಪಕ್ಷಗಾರ ವೆಂಕಟೇಶ್ ಗೆ ಖುದ್ದಾಗಿ ಜಾರಿಯಾಗಿಲ್ಲ ಹಾಗೂ ಇದರ ಬಗ್ಗೆ ಡಿ.ಇ. order sheet ನಲ್ಲಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ.

ನಿಆರ್ 5, ನಿಆರ್ 6, ನಿಆರ್ 11, ನಿಆರ್ 13 (ಎಲ್ಲಾ ಮನವಿಗಳು) ಬಗ್ಗೆ ನಾನು ನನ್ನ ನಿರ್ಣಯದಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ವಿಚಾರಣಾ ಅಧಿಕಾರಿಯ ವ್ಯಾಪ್ತಿಗೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಆರ್ 5, ನಿಆರ್ 6, ನಿಆರ್ 11, ನಿಆರ್ 13 (ಎಲ್ಲಾ ಮನವಿಗಳು) ನ್ನು ನಮ್ಮ ಮ್ಯಾನೇಜ್ಮೆಂಟ್ ನಮ್ಮ ಮುಂದೆ ವಿಚಾರಣೆಯಲ್ಲಿ ಹಾಜರು ಪಡಿಸಿದ್ದರು ಎಂದರೆ ಸರಿ . 1 ನೇ ಪಕ್ಷಗಾರರು ಅನಾರೋಗ್ಯದಿಂಧ ಪೂರ್ವಾನುಮತಿಯನ್ನು ಪಡೆದು, ರಜೆ ಕೇಳಿದ್ದರು, ಆದರೂ ಸಹ ಅವರನ್ನು ಅನಧೀಕೃತ ಗೈರು ಹಾಜರಿ ಎಂದು ತಪ್ಪಾಗಿ ಮ್ಯಾನೇಜ್ ಮೆಂಟ್ ಪರಿಗಣಿಸಿತ್ತು ಎಂದರೆ ಸರಿಯಲ್ಲ. 1 ನೇ ಪಕ್ಷಗಾರರಿಗೆ, ವಿಚಾರಣೆ ಪ್ರಾರಂಭ ಆಗಿರುವುದು, ವಿಚಾರಣೆ ಆಗಿರುವುದು, ಮುಕ್ತಾಯಗೊಂಡಿರುವುದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರಿಗೆ ಖುದ್ದಾಗಿ ನೋಟಿಸನ್ನು ಜಾರಿ ಮಾಡದೇ ವಿಚಾರಣೆಯನ್ನು ನಡೆಸಲಾಗಿದೆ ಎಂದರೆ ಸರಿಯಲ್ಲ. ಯಶೋಧಮ್ಮ ನವರಿಗೆ ನೋಟಿಸು ಜಾರಿಯಾಗಿ ಬರುತ್ತಿದೆ ಎಂದು ಹೇಳಿ ನಾನು 1 ನೇ ಪಕ್ಷಗಾರರಿಗೆ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ನೋಟಿಸನ್ನು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. 1 ನೇಪಕ್ಷಗಾರರಿಗೆ ಡಿಇ ನಲ್ಲಿ ಯಾವುದೇ ನೋಟಿಸು ಜಾರಿಯಾಗಿರಲಿಲ್ಲ ಎಂದರೆ ಸರಿಯಲ್ಲ.

ನಾನು ಯಾವುದೇ ನಿಯಮವನ್ನು ಪಾಲಿಸದೇ, ಎಲ್ಲಾ ನಿಯಮವನ್ನು ಕಾನೂನಿನ ಪ್ರಕಾರ ಪಾಲಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಗಮ ನನ್ನನ್ನು ನೇಮಕ ಮಾಡಿರುವುದರಿಂದ ನಾನು ನಿಗಮದ ಪರವಾಗಿ ನಿರ್ಣಯವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.